ಮಾಡಿ ಬಂದೆ, ಎಂದಿದ್ದ'' ಎಂದ.

ತೀರ್ಥಯಾತ್ರೆಯೆಂದದ್ದು ಕೇಳಿಸಿದ್ದೇ ದೊಡ್ಡಕ್ಕೆ ನಕ್ಕುಬಿಡಬೇಕು ಅನ್ನಿಸಿಬಿಟ್ಟಿತು ಜಾಧವನಿಗೆ. ಮರುಕ್ಷಣ ತನ್ನನ್ನು ತಡೆದುಕೊಂಡ. ಬಹುಶಃ ನಕ್ಕುಬಿಡಬೇಕು ಅನ್ನಿಸಿದ ಗಳಿಗೆಯಲ್ಲೇ ಜಮಶೇದಜೀ ಹೇಳಿದ್ದಕ್ಕೆ ಹೊಸ ಅರ್ಥ ಹೊಳೆದಿರಬೇಕು. ಹಾಗೆ ಹೊಳೆದದ್ದಕ್ಕೆ ಕೂಡ ಕೆಲ ಹೊತ್ತಿನ ಮೊದಲಷ್ಟೇ ರಾವ್‌ಜೀಭಾಯಿಯನ್ನು ಕಣ್ಣಾರೆ ಕಂಡಿದ್ದು ಕಾರಣವಾಗಿರಬೇಕು ಎಂದು ಈಗ ತೋರಿತು. ಜಿತೇಂದ್ರ ಶಹನ ಮಾತಿನಲ್ಲಿ ಲಿಖಿತ ವರದಿಯಲ್ಲಿ ಅಷ್ಟೇಕೆ, ಅವನೇ ಕೊಟ್ಟ ತುಂಬ ಹಳೆಯದಾದ ಫೋಟೊದಲ್ಲಿ ಕಂಡ ರಾವ್‌ಜೀಭಾಯಿಗಿಂತ ಪ್ರತ್ಯಕ್ಷದಲ್ಲಿ ನೋಡಿದ ಮುದುಕ ಹುಟ್ಟಿಸಿದ ಭಾವನೆಯ ಆಕೃತಿ ತೀರ ಬೇರೆಯಾಗಿತ್ತು ಎನ್ನುವಂತೆ ನಕ್ಕುಬಿಡಬೇಕು ಎನ್ನುವ ಲಹರಿಯ ಜಾಗದಲ್ಲಿ ಮುದುಕನನ್ನು ಮನಸ್ಸಿನಲ್ಲೇ ವಂದಿಸುವಂತೆ ಮಾಡಿಯೂ ಹೆಸರು ಹೊಳೆಯಿಸದ ಭಾವನೆಯೊಂದು ನೆಲಸಹತ್ತಿದಾಗ ತುಂಬ ಮಿದುವಾದ ದನಿಯಲ್ಲಿ ಹೇಳಿದ:

''ಮುದುಕನ ಬಗ್ಗೆ ಕೇಳಿ ಗೊತ್ತಿತ್ತು, ಕಂಡಿರಲಿಲ್ಲ. ಈ ಹೊತ್ತೇ ಮೊದಲ ಬಾರಿಗೆ ಕಂಡೆ. ನೀವು ಈಗ ಹೇಳಿದ್ದರ ಮೇಲಿಂದ ಈ ಮೊದಲು ಅವನ ಬಗ್ಗೆ ಕೇಳಿ ತಿಳಿದದ್ದಕ್ಕೆ ಬೇರೆಯ ಅರ್ಥ ಹೊಳೆಯುತ್ತದೆ ನೋಡಿ. ಆ ಮುದುಕ ನಿಜಕ್ಕೂ ಹೋದದ್ದು ಮುಂಬಯಿಯ ಝೋಪಡ ಪಟ್ಟಿಗಳ ಸಂಚಾರಕ್ಕೆ ಬರಿದೆ ನೋಡಲಲ್ಲ, ಮತ್ತೆ ಮೂರು ವರ್ಷಗಳವರೆಗೆ ಖುದ್ದು ವಾಸಿಸಿದ್ದ. ಕೊನೆಗೂ, ಪೊಲೀಸರಿಗೆ ಮಾನಖುರ್ಡಿನ 'ಬೆಗ್ಗರ್ಸ್ ಹೋಮ್'ನಲ್ಲಿ ಇವನು ಸಿಕ್ಕ ಮೇಲೆಯೇ ನಿಜವಾದ ಹಕೀಕತ್ತು ಮನೆಯವರಿಗೆ ಗೊತ್ತಾದದ್ದು!'

ಜಮಶೇದ ಹಾಗೂ ಫ್ರೇನಿ ಇಬ್ಬರ ಬಾಯಿಂದಲೂ – ''ದೇವರೇ! ಯಾಕೆ? ಮಕ್ಕಳು ಸರಿಯಾಗಿ ನೋಡಿಕೊಳ್ಳಲಿಲ್ಲವೆ?'' ಎಂಬಂಥ ಉದ್ಗಾರ ಹೊರಟಿತು. ಆ ಉದ್ಗಾರ ಕೇಳಿದ ನಂತರವೇ ಜಾಧವನಿಗೆ ತಾನು ಮಾಡಿದ ತಪ್ಪಿನ ಅರಿವಾಗಿರಬೇಕು. ಕೂಡಲೇ ಉತ್ತರ ಕೊಡಲಾಗಲಿಲ್ಲ. ಅಪ್ಪ 'ಭಿಕ್ಷುಕ ಗೃಹ'ದಲ್ಲಿ ಸಿಕ್ಕಾಗ ಮಕ್ಕಳಿಗಾದ ಆಘಾತ ಸಣ್ಣದಲ್ಲ. ಮುದುಕ ಝೋಪಡ ಪಟ್ಟಿಗಳ ನಿವಾಸಿಗಳಲ್ಲಿ ತುಂಬ ಜನಪ್ರಿಯನಾಗಿದ್ದನೆನ್ನುವುದು ನಿರ್ವಿವಾದ. ಆದರೆ ಈ ಜನಪ್ರಿಯತೆಯೇ ಅವುಗಳ ಒಡೆಯರ ನಿದ್ದೆಗೇಡಿಗೆ, ಅದಕ್ಕಿಂತ ಹೆಚ್ಚಾಗಿ ಅಲ್ಲಿ ಅಡಗಿಕೊಂಡ ಪಾತಾಳಲೋಕದ ಕಳ್ಳ ವ್ಯವಹಾರದವರ ಸಿಟ್ಟಿಗೆ ಕಾರಣವಾಗಿರಬೇಕೆಂದೂ ಅವರ ದುಷ್ಟ ಹಂಚಿಕೆಯಿಂದಾಗಿಯೇ ಇವನು 'ಭಿಕ್ಷುಕ ಗೃಹ'ವನ್ನು ಸೇರುವಂತಾಗಿರಬೇಕೆಂದೂ ಪೊಲೀಸ್ ಖಾತೆಯವರ ತರ್ಕ. ಆದರೆ ರಾವ್‌ಜೀಭಾಯಿಯ ಮಕ್ಕಳಿಗೇ ಈ ಬಗ್ಗೆ ಖಾತ್ರಿಯಿಲ್ಲ. ಅವರ ಪ್ರಕಾರ, ಅಪ್ಪನಿಗೆ ವಯಸ್ಸಾಗುತ್ತ ಬಂದಹಾಗೆ ಕಾಣೆಯಾದ ಮಗ ಪಡುತ್ತಿರಬಹುದಾದ ಯಾತನೆಯ ಕಲ್ಪನೆಯೂ ದುಸ್ಸಹವಾಗುತ್ತ ಹೋಗಿರಬೇಕು. ಕೊನೆಗೊಂದು ದಿನ, ಇನ್ನು ಸಾಧ್ಯವಿಲ್ಲ ಎಂದೆನ್ನಿಸಿದ ಗಳಿಗೆಯಲ್ಲಿ ಅವನು ಜೀವಿಸುತ್ತಿರಬಹುದೆಂದು ಊಹಿಸಿಕೊಂಡದ್ದನ್ನೆಲ್ಲ ತಾನೇ ಖುದ್ದಾಗಿ ಜೀವಿಸುವ ನಿರ್ಧಾರಕ್ಕೆ ಬಂದೇ ಮನೆಯನ್ನು ತೊರೆದಿರಬೇಕು; ರಾವ್‌ಜೀಭಾಯಿಯ ಮಕ್ಕಳು ಇದನ್ನು ಹೇಳಿದಾಗ ಜಾಧವ ನಂಬಿರಲಿಲ್ಲ. ಪಾರಸೀ ದಂಪತಿಗೆ ಏನೋ ಹೇಳಲು ಹೊರಟಾಗ ಸರಕ್ಕನೆ ಬಾಯಿ ತಪ್ಪಿಬಂದಂತೆ ಬಂದ 'ಬೆಗ್ಗರ್ಸ್ ಹೋಮ್'ನ ಉಲ್ಲೇಖವೇ ಈಗ ಅದನ್ನು ನಂಬಲು ಹಚ್ಚಿರಬೇಕು ಎನ್ನುವ ಹಾಗೆ ತುಟಿ ಕಚ್ಚಿಕೊಂಡ. ಖುದ್ದು ನೋಡಿದ ಮುದುಕನಲ್ಲಿ ಕಂಡ ಏನೋ ಇಂಥ ವ್ಯಕ್ತಿಯೂ ಈ ಜಗತ್ತಿನಲ್ಲಿ ಸಾಧ್ಯ ಅನ್ನಿಸಲು ಹಚ್ಚಿದ್ದರೂ ಆಶ್ಚರ್ಯವಲ್ಲ! ಆದರೂ ರಾವ್‌ಜೀಭಾಯಿಯ ಬಗೆಗಿನ ಈ ಮಾಹಿತಿ ಮಾತ್ರ